ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕಲ್ಲು ಗಣಿ ಗುತ್ತಿಗೆಗಾಗಿ ನವೀಕರಣ ಅರ್ಜಿ ಸಲ್ಲಿಸಿದ ವಿವರ

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು
1)	ಬಿ.ಎಸ್. ಭಾಸ್ಕರ್ ರಾವ್
2)	ಎ.ಎಸ್. ನಾಗರಾಜ್
3)	ಆರ್. ಕಣ್ಣಸ್ವಾಮಿ
	ಹೊಸನಗರ ತಾಲ್ಲೂಕು
4)	ಡಿ. ಶಶಿಧರನ್
5)	ಹೆಚ್.ಜಿ. ಕಲ್ಯಾಣಪ್ಪ ಗೌಡ

ಶಿವಮೊಗ್ಗದ ಶ್ರೀಗಂಧದೆಣ್ಣೆ ಕಾರ್ಖಾನೆ ಬಗ್ಗೆ.

3353(4140) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿವಮೊಗ್ಗದ ಶ್ರೀಗಂಧದೆಣ್ಣೆ ಕಾರ್ಖಾನೆ ಮುಚ್ಚುವ ಹಂತದಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ;

ಆ) ಈ ಕಾರ್ಖಾನೆಯ ಕಳೆದ 3 ವರ್ಷಗಳ ಲಾಭ ನಷ್ಟದ ವಿವರಗಳನ್ನು ವರ್ಷವಾರು ನೀಡುವುದು;

ಇ) ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸುವುದಕ್ಕೆ ಸರ್ಕಾರದ ನಿಲುವೇನು ಹಾಗೂ ಇದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :—

ಅ) ಇಲ್ಲ.

ಉದ್ಭವಿಸುವುದಿಲ್ಲ.

ಆ) ಶಿವಮೊಗ್ಗ ವಿಭಾಗವು ಕೆಎಸ್‌ಡಿಎಲ್ ಸಂಸ್ಥೆಯ ಒಂದು ಭಾಗ ಮಾತ್ರ. ಲಾಭ ಅಥವಾ ನಷ್ಟವನ್ನು ವಿಭಾಗವಾರು ಲೆಕ್ಕ ಹಾಕದೆ ಒಟ್ಟಾಗಿ ಕಂಪನಿಯ ಲಾಭ ಅಥವಾ ನಷ್ಟ ಎಂದು ಲೆಕ್ಕ ಮಾಡಲಾಗುತ್ತದೆ.

ಇ) ಶ್ರೀ ಗಂಧದ ಸರಬರಾಜು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ಅರಣ್ಯ ಇಲಾಖೆಯವರು ಕಂಪನಿಯ ಬೇಡಿಕೆಗಳನ್ನು ಪೂರೈಸುವ ಹಂತದಲ್ಲಿಲ್ಲ. ಆದರೂ ಶಿವಮೊಗ್ಗ ವಿಭಾಗದಲ್ಲಿ ಕಾರ್ಮಿಕರ ಹಿತದೃಷ್ಟಿಯಿಂದ ಅಗರ್‌ಬತ್ತಿಗಳನ್ನು ಉತ್ಪಾದಿಸಲು ನಿರ್ಧರಿಸಿ ಡಿಸೆಂಬರ್ 1998 ದಿಂದ ಅಗರ್‌ಬತ್ತಿ ಉತ್ಪಾದನೆಯನ್ನು ಪ್ರಾರಂಭಿಸಲಾಗಿದೆ. ಮಾನ್ಯ ಬಿ.ಐ.ಎಫ್.ಆರ್. ಸಂಸ್ಥೆಯು ಇಡೀ ಕಂಪನಿಯ ಪುನರುಜ್ಜೀವನ ಯೋಜನೆಯನ್ನು ಅನುಮೋದಿಸಿದ್ದು, ಶಿವಮೊಗ್ಗ ವಿಭಾಗವು ಕಂಪನಿಯ ಒಂದು ಭಾಗವಾಗಿರುತ್ತದೆ. ಅನುಮೋದಿಸಲಾದ ಪುನರುಜ್ಜೀವನ ಯೋಜನೆಯು ಮಾರ್ಚ್ 2005ರ ವರೆಗೆ ಜಾರಿಯಲ್ಲಿರುತ್ತದೆ.

ತೀರ್ಥಹಳ್ಳಿ ಪುರಪಂಚಾಯಿತಿಗೆ ನೀಡಿದ ಅನುದಾನ.

3352(4500) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ 2 ವರ್ಷದಿಂದ ತೀರ್ಥಹಳ್ಳಿ ಪುರಪಂಚಾಯಿತಿಗೆ ಸರ್ಕಾರದಿಂದ ನೀಡಿದ ಅನುದಾನ ಎಷ್ಟು ವಿಶೇಷ ಅನುದಾನವನ್ನೇನಾದರೂ ನೀಡಲಾಗಿದೆಯೇ

ಆ) ಈ ರೀತಿಯ ಅನುದಾನವನ್ನು ಯಾವ ಯಾವ ಕಾಮಗಾರಿಗಳಿಗೆ ನೀಡಲಾಗಿದೆ

ಇ) ಇದರಲ್ಲಿ ಈವರೆಗೂ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :—

ಅ) ಕಳೆದ ಎರಡು ವರ್ಷಗಳಿಂದ (1998-99ರಿಂದ ಈ ವರೆಗೆ) ಸರ್ಕಾರದಿಂದ ತೀರ್ಥಹಳ್ಳಿ ಪಟ್ಟಣ ಪಂಚಾಯಿತಿಗೆ ಈ ಕೆಳಕಂಡ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ರಾಜ್ಯ ಹಣಕಾಸು ಆಯೋಗದ ಅನುದಾನ	54.17
ಹತ್ತನೆ ಹಣಕಾಸು ಆಯೋಗದ ಅನುದಾನ	30.14
ಎಸ್‌ಜೆಎಸ್‌ಆರ್‌ವೈ ಯೋಜನೆಯ ಅನುದಾನ (ನಗರ ಕೂಲಿ ಉದ್ಯೋಗ)	11.09

ಆದಾಗ್ಯೂ ಯಾವುದೇ ವಿಶೇಷ ಅನುದಾನ ನೀಡಿರುವುದಿಲ್ಲ.